# ಪಾರ್ಲರ್‌ನಲ್ಲಿ ಹರಕೆಯ ಕುರಿ

ಸಾಧಾರಣ ರೂಪವುಳ್ಳವರೂ ಸಲೂನ್‌ನಿಂದ ಹೊರಬಿದ್ದಾಗ, 'ಇದು ಅವರೇನಾ?' ಎಂದು ಆಶ್ಚರ್ಯಪಡುವಷ್ಟು ಮೋಹಕವಾಗಿ ಬದಲಾಗಿರುತ್ತಾರೆ. ಪಾರ್ಲರ್‌ಗಳಿಗಿರುವ ತಾಕತ್ತೇ ಇದು, ಬಾಹ್ಯವಾಗಿ ಚಂದ ಕಾಣಿಸುವಂತೆ ಮಾಡಬಲ್ಲ ಜಾದೂ ಮನೆಯದು.

■ ಧಾರಿಣಿ ಮಾಯಾ

ಚಿತ್ರ: ಸಂತೋಷ್ ಸಸಿಹಿತ್ಲು



ಒಂದು ಊರು, ಅದರಲ್ಲಿನ ಒಂದು ಏರಿಯಾದಲ್ಲಿ ಜನರಿಗೆ ಏನೆಲ್ಲಾ ಬೇಕೋ, ಎಲ್ಲಾ ರೀತಿಯ ಮೂಲಭೂತ ಅನುಕೂಲಗಳು ಹುಟ್ಟಿಕೊಳ್ಳುತ್ತವೆ. ಅವುಗಳಲ್ಲೊಂದಾದ ಮೂಲಭೂತ ಅವಶ್ಯಕತೆಯೆಂದರೆ 'ಹೆಣ್ಣುಮಕ್ಕಳ ಬ್ಯೂಟಿ ಪಾರ್ಲರ್.'

ನೀನೆಲ್ಲೋ ನಾನಲ್ಲೇ ಎನ್ನುತ್ತ ಈ ಬ್ಯೂಟಿ ಪಾರ್ಲರ್‌ಗಳು ಉಗಮವಾಗಿಬಿಡುತ್ತವೆ. ಹೆಚ್ಚಿಗೆ ಹೇಳೋದೇನಿದೆ! ಪಾರ್ಲರ್ ಎಂದಾಕ್ಷಣ ಹೆಣ್ಣುಮಕ್ಕಳು ಕಣ್ಣರಳಿಸೋದು ಸಹಜ. ಪ್ರತಿನಿತ್ಯ ಸುಂದರವಾಗಿ ಕಾಣಬೇಕೆಂಬುದು ಎಲ್ಲ ನೀರೆಯರ ಕನಸು. ಹಾಗಾಗಿ ಪಾರ್ಲರ್‌ಗಳಲ್ಲೇ ಹಲವು ಹೆಣ್ಣುಮಕ್ಕಳು ತಮ್ಮ ಅರ್ಧ ಆಯುಷ್ಯ ಕಳೆದುಬಿಡುತ್ತಾರೆ. ಕೊನೇಪಕ್ಷ ಹುಲುಸಾಗಿ ಬೆಳೆದ ಹುಬ್ಬುಗಳನ್ನು ಕಾಮನಬಿಲ್ಲಿನಂತೆ ಮಾಡಿಸಿಕೊಳ್ಳೋ ಸಲುವಾಗಿಯಾದರೂ ಪಾರ್ಲರ್‌ಗೆ ಲಗ್ಗೆ ಹಾಕುತ್ತಾರೆ. ಇಂದಿನ ನಾರಿಯರ ಅವಶ್ಯಕತೆಗಳನ್ನು ಪೂರೈಸಲು ಇಂದು ಗಲ್ಲಿ ಗಲ್ಲಿಗಳಲ್ಲಿಯೂ ಪಾರ್ಲರ್‌ಗಳಿವೆ. 'ಏರಿಯಾಗ್ ಬಂದೋಳು ಬ್ಯೂಟಿ ಪಾರ್ಲರ್‌ಗೆ ಬರಲ್ವಾ' ಎಂಬ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಸಿನಿಮಾದ ಹೀರೋ ತನ್ನ ಹುಡುಗಿಯನ್ನು ಛೇಡಿಸುವ ಪಂಚ್ ಡೈಲಾಗನ್ನ ಯಾರು ತಾನೇ ಮರೆಯಲು ಸಾಧ್ಯ!

ಯಾವ ಓದಿನ ಗೋಜೂ ಇರದೆ ಒಂದಾರು ತಿಂಗಳು ಪಾರ್ಲರ್ ಕೋರ್ಸ್ ಮಾಡಿದರೆ ಮುಗಿಯಿತು, ಹೆಣ್ಣುಮಕ್ಕಳು ತಮ್ಮದೇ ಸ್ವಂತ ಪಾರ್ಲರ್‌ನ ವಾರಸುದಾರರಾಗಿ ಬಿಡುತ್ತಾರೆ. 15/20 ಚದರ ಅಡಿ ಸಿಕ್ಕರೆ ಪಾರ್ಲರ್ ರೆಡಿ. ಕೆಲವರು ತಮ್ಮ ಮನೆಯ ಒಂದು ಚಿಕ್ಕ ಕೋಣೆಯನ್ನೇ ಗ್ರಾಹಕರ ಶೃಂಗಾರಕ್ಕೆಂದು ಮೀಸಲಿಡುತ್ತಾರೆ. ಲಕ್ಷ್ಮಿ ಬ್ಯೂಟಿ ಪಾರ್ಲರ್, ಸ್ನೇಹ ಹರ್ಬಲ್ ಬ್ಯೂಟಿ ಪಾರ್ಲರ್, ಸಂಜನ ಸ್ಕಿನ್ ಅಂಡ್ ಹೇರ್‌ನಂಥ ಹೆಸರಿನ ಬೆಂಕಿಪೊಟ್ಟಣದ ಪಾರ್ಲರ್‌ಗಳು ಒಂದೆಡೆಯಾದರೆ, ಇನ್ನು ಪಟ್ಟಣಗಳಲ್ಲಿ, ಶಹರುಗಳಲ್ಲಿ ಬ್ರಾಂಡೆಡ್ ಪಾರ್ಲರ್‌ಗಳ ಸಾಲುಸಾಲನ್ನೇ ಕಾಣಬಹುದು. ಆದರೆ ಇವೆಲ್ಲ ಪಾರ್ಲರ್ ಜಾಗದಲ್ಲಿ ಅತ್ಯಾಧುನಿಕವಾಗಿ 'ಸಲೂನ್' ಎಂಬ ನಾಮಧೇಯ ಅಂಟಿಸಿಕೊಂಡಿರುತ್ತವೆ. ಹಾಗಾಗಿ ಪಾರ್ಲರ್ ಹಾಗೂ ಸಲೂನ್ ಎಂಬ ಎರಡೂ ನಾಮಾವಳಿಗಳನ್ನು ಅಲ್ಲಲ್ಲಿ ತೂರಿಸಿದ್ದೇನೆ. ಲಾಕ್ಮೆ, ಗ್ರೀನ್ ಟ್ರೆಂಡ್ಸ್, **YLG**, ನ್ಯಾಚುರಲ್ಸ್ ಹೇರ್ ಅಂಡ್ ಸ್ಪಾ – ಹೀಗೆ ಅನೇಕ ಬ್ರಾಂಡೆಡ್ ಹೆಸರುಗಳಲ್ಲಿ ಸಲೂನ್‌ಗಳು ರಾರಾಜಿಸುತ್ತಿವೆ. ಫ್ಯಾಷನ್ ಪ್ರಿಯರು ಹೆಚ್ಚಾಗುತ್ತಿರುವ ಬೆನ್ನಲ್ಲೇ ಸಲೂನ್‌ಗಳ ಸರಪಳಿಯೂ ಬೆಳೆಯುತ್ತಿದೆ. ಆಸ್ಪತ್ರೆ, ಕ್ಲಿನಿಕ್‌ಗಳಲ್ಲಿ ಪೂರ್ವಭಾವಿಯಾಗಿ ಹೆಸರು ನೊಂದಾಯಿಸುವಂತೆ, ಸಲೂನ್‌ಗಳಲ್ಲೂ ಇಂಥ ದಿವಸ, ಇಂತಹುದೇ ಸಮಯಕ್ಕೆಂದು ಗ್ರಾಹಕರು ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳಬೇಕಾಗುತ್ತದೆ. ಪರಿಣಿತಿಯುಳ್ಳ ಯುವಕರೂ ಯುವತಿಯರೂ ಇಲ್ಲಿ ಕೆಲಸ ಮಾಡುತ್ತಾರೆ. ಗ್ರಾಹಕರು ಇಂಥದೇ ಪಾರ್ಲರ್ ಹಾಗೂ ಇಂತಹವರಿಂದಲೇ ಸರ್ವೀಸ್ ಬೇಕೆಂದು ಮುಗಿಬೀಳುತ್ತಾರೆ.

ಫ್ಯಾಷನ್‌ಗೆ ಇಂದು ಗಂಡು–ಹೆಣ್ಣು ಇಬ್ಬರೂ ಸಮಪಾಲುದಾರರೇ. ಯುವತಿಯರಷ್ಟೇ ಯುವಕರೂ ಸೌಂದರ್ಯಪ್ರಿಯರಾಗಿದ್ದಾರೆ. ಸಾಮಾನ್ಯವಾಗಿ ಮಾಡಿಸಿಕೊಳ್ಳುವ ಹೇರ್ ಕಟ್, ಶೇವಿಂಗ್ ಹೊರತಾಗಿ ಹೆಣ್ಣುಮಕ್ಕಳಂತೆ ಐಬ್ರೊ, ಫೇಷಿಯಲ್, ಮೆನಿಕ್ಯೂರ್, ಪೆಡಿಕ್ಯೂರ್, ವ್ಯಾಕ್ಸಿಂಗ್ ಎಲ್ಲಕ್ಕೂ ತಮ್ಮನ್ನು ಒಡ್ಡಿಕೊಳ್ಳುತ್ತಿದ್ದಾರೆ. ಅದೇನೇ ಇದ್ದರೂ ಹೆಣ್ಣುಮಕ್ಕಳದೇ ಮೇಲುಗೈ ಎನ್ನಿ. ಇಬ್ಬರ ಅವಶ್ಯಕತೆಗೆ ತಕ್ಕಂತೆ ಇಂದು ಸಾಕಷ್ಟು **Unisex Saloon**ಗಳ ಕಾರುಬಾರನ್ನು ನೋಡಬಹುದು. ಕುಟುಂಬ ಸಮೇತರಾಗಿ ಎಲ್ಲರೂ ತಮಗೆ ಬೇಕಾದ ಬ್ಯೂಟಿ ಸರ್ವೀಸ್‌ಗಳನ್ನು ಇಲ್ಲಿ ಮಾಡಿಸಿಕೊಳ್ಳಬಹುದು. ಆದರೆ ಅದಕ್ಕೆ ತಕ್ಕಂತೆ ಜೇಬು ತುಂಬಿರಬೇಕಷ್ಟೆ.

ಚಿಕ್ಕಮಕ್ಕಳಿಂದ ಹಿಡಿದು ನೆರಿಗೆ ಬಂದವರಿಗೂ, ಸಲೂನ್ ಅಚ್ಚುಮೆಚ್ಚಿನ ತಾಣ. ಸಣ್ಣ ಮಕ್ಕಳು ತಮಗೆ ಯಾವ ಹೇರ್‌ಕಟ್ ಬೇಕೆಂದು ತಾವೇ ನಿರ್ಧಾರ ಮಾಡಿರುತ್ತಾರೆ. ಯುವಜನತೆ ತಮ್ಮ ನೆಚ್ಚಿನ ನಟ–ನಟಿಯರ ಹಾಗೆ ಕಾಣಲು ಪಾರ್ಲರ್ ಮೊರೆ ಹೋಗುತ್ತಾರೆ. ಮುಖದ ನೆರಿಗೆ ಕಡಿಮೆ ಮಾಡಿಕೊಳ್ಳಲು, ಕೂದಲು ಕಪ್ಪು ಮಾಡಿಸಿಕೊಂಡು ವಯಸ್ಸು ಮರೆಮಾಚಲು ಯಾರಿಗೆ ತಾನೇ ಇಷ್ಟವಿಲ್ಲ ಹೇಳಿ? ಕೂದಲಿಗೆ ಈಗ ಕಪ್ಪು–ಕಂದು ಬಣ್ಣಗಳಿರಲಿ, ನೀಲಿ, ಗುಲಾಬಿ, ಹಸಿರು ಬಣ್ಣಗಳನ್ನೂ ಹಾಕಿಸಿಕೊಳ್ಳೋ ಫ್ಯಾಷನ್ ಬಂದಿದೆ. ಕೆಲವು ಸಲ ಇದು ಅತಿರೇಕಕ್ಕೆ ಹೋಗಿ ಕೆಂಭೂತದಂತೆ ಕಾಣುವರು.

ಸಾಧಾರಣ ರೂಪವುಳ್ಳವರೂ ಕೂಡ ಸಲೂನ್‌ನಿಂದ ಲಕಲಕನೆ ಹೊಳೆಯುತ್ತ ಹೊರ ಬಿದ್ದಾಗ, 'ಇದು ಅವರೇನಾ?' ಎಂದು ಆಶ್ಚರ್ಯಪಡುವಷ್ಟು ಮೋಹಕವಾಗಿ ಬದಲಾಗಿರುತ್ತಾರೆ. ಈ ಪಾರ್ಲರ್‌ಗಳಿಗಿರುವ ತಾಕತ್ತೇ ಅಂಥದ್ದು. ಇದು ಬಾಹ್ಯವಾಗಿ ಚಂದ ಕಾಣಿಸುವಂತೆ ಮಾಡಬಲ್ಲ ಒಂದು ಜಾದೂ ಮನೆ. ಬಾಹ್ಯವಾಗಿ ಸುಂದರವಾಗಿ ಕಾಣಿಸಿಕೊಂಡಾಗ, ಆಂತರಿಕವಾಗಿ ಒಂದು ರೀತಿಯ ಆತ್ಮಸ್ಥೈರ್ಯ ಉಕ್ಕುವುದು ಎಂಬ ಮಾತಿದೆ. ಅದು ಸ್ವಲ್ಪ ಮಟ್ಟಿಗೆ ನಿಜವೂ ಹೌದು. ಅದೇನೇ ಇದ್ದರೂ, ಬಾಹ್ಯಸೌಂದರ್ಯವನ್ನು ಪಡೆದುಕೊಳ್ಳುವ ಭರದಲ್ಲಿ, ಆಂತರಿಕ ಸೌಂದರ್ಯವನ್ನು ಕಳೆದುಕೊಳ್ಳಬಾರದಷ್ಟೇ!

ಕೊರೊನಾ ಅತಿರೇಕಕ್ಕೆ ಹೋಗಿ ಲಾಕ್‌ಡೌನ್‌ನಿಂದ ಎಲ್ಲಾ ವಹಿವಾಟುಗಳು ಬಂದ್ ಆದಾಗ,